ಬೇರೆ ಯಾವ ಕೇಸ್‌ನಲ್ಲೂ ಹಾರನ್ ಮಾಡತಕ್ಕಂಥ ಪದ್ಧತಿ ಇಲ್ಲ. ನಾವು ೨೧ನೇ ಶತಮಾನಕ್ಕೆ ಹೋಗಬೇಕಾಗಿದೆಯಲ್ಲ ಆದಕ್ಕಾಗಿ ಹಾರನ್ ಎಲ್ಲಾ ತೆಗೆದುಹಾಕಬೇಕೆಂದು ನಾವು ಯೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕಾಲದಲ್ಲಿ ಬಹಳಷ್ಟು ಮುಗಿಸಿ ಆಯಿತು. ಇನ್ನು ಮೇಲೆ ಪೂರ್ತಿ ರೋಡ್ ತುಂಬಾ ಅಪಘಾತಗಳು ಆಗಲಿ ಎಂದು ಈ ರೀತಿ ಮಾಡುತ್ತೀರಾ ?

ಶ್ರೀ ಕೆ. ಪಸಂತ ಬಂಗೇರಾ.—ಹಾರನ್ ಅವಶ್ಯಕತೆಯೇ ಇಲ್ಲ ಎಂಬ ವಿಚಾರ ಬಂತು. ಕೆಲವು ಹಾರನ್ ಶಬ್ದ ಬರುತ್ತವೆ, ಶಬ್ದ ಇಲ್ಲದೇ ಇರತಕ್ಕಂಥ ಹಾರನ್ ಇದೆ. ಬೇರೆ ಬೇರೆ ರೀತಿಯ ಹಾರನ್ ಇವೆ ಎಂಬ ವಿಚಾರ ಬಂತು. ನಾನು ಶಬ್ದ ಮಾಡುವಂತಹ ಹಾರನ್ ಬಗ್ಗೆ ಹೇಳುತ್ತಿದ್ದೇನೆ. ಆದರೆ ಅದರ ಬದಲಾಗಿ ಹಾರನ್ ವಿಚಾರದಲ್ಲಿ ಅನೇಕ ವಿವಾದ ಬರುತ್ತಾ ಇದೆ. ಹಾರನ್ ಬೇಡಿ, ದೊಡ್ಡ ಘಂಟೆಯನ್ನು ಕಟ್ಟಿಬಿಡಿ. ಆ ಘಂಟೆಯ ಸದ್ದಿಗೆ ಎಲ್ಲಾ ಜನಗಳೂ ಜಾಗ ಬಿಡುತ್ತಾರೆ, ಎಲ್ಲಾ ಬಸ್‌ಗಳನ್ನೂ ಸರಿಯಾಗಿ ಚೆಕ್ ಮಾಡಿ ನಾವು ಬಿಡುತ್ತಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಒಂದು ಬಸ್‌ನಲ್ಲಿ ನಾನೇ ಪ್ರಯಾಣ ಮಾಡುತ್ತಿದ್ದೆ. ಅದೂ ರಾತ್ರಿ ಬಸ್. ಅದಕ್ಕೆ ಸೈಟ್ಸ್ ಟೈರೇ ಇರಲಿಲ್ಲ. ಇದು ಇವರು ಚೆಕ್ ಮಾಡಿ ಬಿಟ್ಟ ಬಸ್. ನಾವು ದಾರಿಯಲ್ಲಿ ಸಾಯುವಂತಹ ಪರಿಸ್ಥಿತಿ ಇದೆ. ರಾತ್ರಿವೇಳೆ ಹೊರಡುವ ಬಸ್‌ಗಳು ಅಲ್ಲಲ್ಲೇ ರೋಡ್‌ನಲ್ಲಿ ನಿಂತು ಜನಗಳಿಗೆ ತೊಂದರೆಯಾಗತಕ್ಕಂಥ ಪರಿಸ್ಥಿತಿ ಇದೆ.

ಶ್ರೀ ವೀರಣ್ಣ.—ಅದಕ್ಕೆ ನಾನು ಉತ್ತರ ಏನು ಹೇಳಲಿ.

## ಸಂಡೂರಿನಲ್ಲಿ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ

೨೭(೨೬೬) ಶ್ರೀ ಯು. ಭೂಪತಿ. (ಸಂಡೂರು).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಸಂಡೂರಿನಲ್ಲಿ ನ್ಯಾಯಾಲಯದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ನ್ಯಾಯಾಲಯದ ಸ್ಥಾಪನೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ಮತ್ತು ಯಾವಾಗ ನ್ಯಾಯಾಲಯ ಸ್ಥಾಪಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

(ಅ) ಹೌದು.

(ಆ) ಸಂಡೂರಿನಲ್ಲಿ ಮುನ್ಸೀಫ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಸ್ಥಾಪಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ಪೂರಕವಾಗಿ, ಹೈಕೋರ್ಟಿನವರೂ ಕೂಡಾ ಇಲ್ಲಿ ನ್ಯಾಯಾಲಯದ ಅವಶ್ಯಕತೆ ಇದೆ ಎಂದು ಹೇಳಿ ತಮ್ಮ ಪಂಜೂರಾತಿಯನ್ನು ಮತ್ತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮುಂದಿನ ಕ್ರಮ ಆರ್ಥಿಕ ಇಲಾಖೆಯಲ್ಲಿ ಇದೆ. ಅವರಿಂದ ಕ್ಲಿಯರ್ ಆಗ ತಕ್ಕಂಥ ಸನ್ನಿವೇಶವನ್ನು ನಾನುಗಮನಿಸಿದ್ದೇನೆ. ಈ ಬಗ್ಗೆ ನಾನು ಆಶಾದಾಯಕವಾಗಿ ಇದ್ದೇನೆ, ಬೇಗ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಆಶಾದಾಯಕವಾದ ಉತ್ತರ ಹೇಳಿದ್ದಾರೆ.

ಶ್ರೀ ಯು. ಭೂಪತಿ.—ಪಾರ್ಲಿಮೆಂಟರಿ ಸಿಸ್ಟಮ್‌ನಲ್ಲಿ ಪರಿಶೀಲನೆಯಲ್ಲಿದೆ ಎಂದರೆ ಅದು ಹತ್ತು ವರ್ಷ ಆಗಬಹುದು, ೨೦ ವರ್ಷ ಆಗಬಹುದು ಅಥವಾ ನೂರು ವರ್ಷಗಳು ಆಗಬಹುದು. ನಾನು ಡೆಫಿನೆಟ್ ಆಗಿ ಯಾವಾಗ ಆಗುತ್ತದೆ ಎಂದು ಕೊಶ್ಚನ್ ಕೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾರೀಖು, ದಿನವನ್ನು ಗೊತ್ತು ಮಾಡುವುದಕ್ಕೆ ಆಗುವುದಿಲ್ಲ. ಬೇಗ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಬೇಗ ಎಂದರೆ ಎಷ್ಟು ತಿಂಗಳು, ಎಷ್ಟು ವರ್ಷ ಅದನ್ನಾದರೂ ಹೇಳಿ. ಬಿಲ್ಡಿಂಗ್ ಕೂಡಾ ರೆಡಿ ಇದೆ, ಇದು ಅವರಿಗೆ ಗೊತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ರೀತಿ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ಅವರು ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ.

ಶ್ರೀ ಯು. ಭೂಪತಿ.—ತಾವೇ ಈ ರೀತಿ ಹೇಳಿದರೆ ಹೇಗೆ, ಈ ರೀತಿ ಅವರೆ ನಾವು ಪ್ರಶ್ನೆ ಕೇಳುವುದಕ್ಕೆ ಆಗುವುದಿಲ್ಲ.

ಶ್ರೀ ಪಂಪಾಪತಿ.—ಪ್ರಶ್ನೆ ಕೇಳುವ ಉದ್ದೇಶ ಏನು ? ನಾವು ಉತ್ತರ ಪಡೆಯಬೇಕೆಂದು.

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ, ಅವರು ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ.

ಶ್ರೀ ಯು. ಭೂಪತಿ.—ಸಮರ್ಪಕ ಎಂದು ಯಾವರೀತಿ ಹೇಳುತ್ತೀರಿ ?

ಶ್ರೀ ಪಂಪಾಪತಿ.—ಪರಿಶೀಲನೆ ಮಾಡುತ್ತೇವೆ ಎಂದು ಹೇಳುವುದನ್ನು ಕೇಳುವುದಕ್ಕೆ ಬಂದಿಲ್ಲ.

ಅಧ್ಯಕ್ಷರು.—ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಇದೆ, ಓದಿ ನೋಡಿ, ಆದಷ್ಟು ಬೇಗ ಮಾಡಿಸುತ್ತೇವೆ ಎಂದು ಸಚಿವರು ಹೇಳಿದ್ದಾರೆ.

ಶ್ರೀ ಯು. ಭೂಪತಿ.—ನಾನೂ ಓದಿಕೊಂಡೇ ಬಂದಿರುವುದು. ತಾವು ದಯವಿಟ್ಟು ಈ ರೀತಿ ಹೇಳಬೇಡಿ. ಅದನ್ನು ಓದಿಕೊಂಡೇ ನಾನು ಪ್ರಶ್ನೆಹಾಕಿರುವುದು.

ಅಧ್ಯಕ್ಷರು.—ಆದಷ್ಟು ಬೇಗ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಯು. ಭೂಪತಿ.—ಎಷ್ಟು ವರ್ಷಗಳಲ್ಲಿ ಮಾಡುತ್ತೇವೆ. ಎಂದು ಹೇಳುತ್ತಾರೆ ? ಆಲ್ಲಿ ಬಿಲ್ಡಿಂಗ್ ಕೂಡಾ ರೆಡಿ ಇದೆ, ಡಿಪಾರ್ಟ್‌ಮೆಂಟಿಗೆ ಹ್ಯಾಂಡ್ ಓವರ್ ಆಗಿದೆ ಟೈಮ್ ಲಿಮಿಟ್ ಕೊಡಬೇಕು.

ಅಧ್ಯಕ್ಷರು.—ಟೈಮ್ ಲಿಮಿಟ್ ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಕಾನಡೆಯವರೇ ತಾವು ಪ್ರಶ್ನೆ ಕೇಳಿ.

## ಟ್ಯಾಕ್ಸಿ ಹಾಗೂ ಟೆಂಪೋಗಳಲ್ಲಿ ಆಸನಗಳನ್ನು ಹೆಚ್ಚಿಸುವುದು

೨೮ (೧೪೫) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ).—ಮಾನ್ಯ ಸಾರಿಗೆ ಸಣ್ಣ ಉಳಿತಾಯಗಳು ಹಾಗೂ ಬಂದೀಖಾನೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದ ಟ್ಯಾಕ್ಸಿ ಮತ್ತು ಟೆಂಪೋ ಮಾಲೀಕರು ಈಗಿರುವ ಮೋಟಾರುವಾಹನ ಶಾಸನದ ಪ್ರಕಾರ ೬+೧ ಸೀಟು ಬದಲು ೧೨+೧ ಸೀಟು ಕುರಿತು ಪರವಾನಿಗೆಯನ್ನು ನೀಡ ಬೇಕೆಂದು ಸರ್ಕಾರ ದವರನ್ನು ಕೋರಿದ್ದಾರೆಯೇ ?

೨. ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

೩. ಅವರ ಬೇಡಿಕೆಯನ್ನು ಈಡೇರಿಸಿದ್ದಾರೆ ಸರ್ಕಾರದವರಿಗೆ ತೆರಿಗೆಯಿಂದಾಗಿ ಲಾಭ ಆಗುವುದೇ ಅಥವಾ ನಷ್ಟವಾಗುವುದೇ ?